ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/05/ಇಸಿಎಸ್(1)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:03.10.2023

## ಜ್ಞಾಪನ

ವಿಷಯ: ಸೆಪ್ಟೆಂಬರ್ 2023 ರ ಡಿಪ್ಲೊಮಾ Makeup ಪರೀಕ್ಷೆಯ (SEE) ಥಿಯರಿ ಪರೀಕ್ಷೆಯ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಾಗುವ ಉಪನ್ಯಾಸಕರುಗಳ ಮೇಲೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 05/ಇಸಿಎಸ್(1)/2023 ದಿ:27.09.2023
2) ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು, ದಿ:17.04.2015

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೆಪ್ಟೆಂಬರ್ 2023 ರ ಡಿಪ್ಲೊಮಾ Makeup ಪರೀಕ್ಷೆಯ (SEE) ಥಿಯರಿ ಪರೀಕ್ಷೆಯ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಉಲ್ಲೇಖಿತ ಜ್ಞಾಪನದನ್ವಯ ತಾಂತ್ರಿಕ ಪರೀಕ್ಷಾ ಮಂಡಳ/ ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್ ಕ್ಯಾಂಪಸ್, ಬೆಂಗಳೂರು ಮೌಲ್ಯಮಾಪನ ಕೇಂದ್ರದಲ್ಲಿ ನಡೆಸಲಾಗುತ್ತಿದೆ. ಮೌಲ್ಯಮಾಪನ ಕಾರ್ಯವನ್ನು ನಿಗದಿತ ಸಮಯದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯಶಸ್ವಿಯಾಗಿ ಪೂರ್ಣಗೊಳಿಸುವುದು ನಮ್ಮೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರು/ಉಪನ್ಯಾಸಕರುಗಳ ಸಹಕಾರವನ್ನು ಕೋರಲಾಗಿದೆ. ಮುಂದುವರೆದು ಉಲ್ಲೇಖ(2)ರ ಸರ್ಕಾರಿ ಆದೇಶದ ಪ್ರಕಾರ ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಾದ ಉಪನ್ಯಾಸಕರ ಸಂಬಳವನ್ನು ಗೈರು ಹಾಜರಾದ ಅವಧಿಗೆ ಕಟಾಯಿಸಲು ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿನ ಪರೀಕ್ಷಕರ ಪಟ್ಟಿಯಲ್ಲಿನ **ಉಪನ್ಯಾಸಕರುಗಳು ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಾದಲ್ಲಿ ಆಯಾ ಪಾಲಿಟೆಕ್ನಿಕ್‌ಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು** ಮತ್ತು ವಿದ್ಯಾರ್ಥಿಗಳಿಗೆ ಆಗುವ ಶೈಕ್ಷಣಿಕ ಅನಾನುಕೂಲಗಳಿಗೆ ಸಂಸ್ಥೆಯ ಪ್ರಿನ್ಸಿಪಾಲರುಗಳನ್ನೇ ನೇರ ಜವಾಬ್ದಾರರನ್ನಾಗಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಕಾರ್ಯದರ್ಶಿ
03.10.23

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ - ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಇ-ಗವರ್ನೆನ್ಸ್ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಕಂಪ್ಯೂಟರ್ ವಿಭಾಗಕ್ಕೆ - ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇಬಿಎಲ್ ವಿಭಾಗ
4. ನೋಡಲ್ ಮೌಲ್ಯಮಾಪನ ಕೇಂದ್ರಗಳ ನೋಡಲ್ ಅಧಿಕಾರಿಗಳು/ಶಿಬಿರಾಧಿಗಳು/ಸಹಾಯಕ ಶಿಬಿರಾಧಿಕಾರಿಗಳು
5. ಕಾರ್ಯದರ್ಶಿಯವರ ಆಪ್ತ ಶಾಖೆ